# ಅನುವಾದಕ್ಕೆ ಕೃತಿಯ ಸಾಹಿತ್ಯಿಕ ಮೌಲ್ಯ ಮುಖ್ಯ

ರಾಜ್ಯಶ್ರೀ ಕುಳಮರ್ವ

1

ಕೆಲವೊಮ್ಮೆ ಕೆಲವು ಕೃತಿಗಳನ್ನು ಓದಿದಾಗ ಅವುಗಳ ಕಥನಕ್ರಮ, ಸರಾಗವಾಗಿ ಓದಿಸಿಕೊಂಡು ಹೋಗುವ ಪರಿ, ಮತ್ತು ಅವು ಕಟ್ಟಿಕೊಡುವ ಬೇರೆಯದೇ ಆದ ಒಂದು ಪ್ರಪಂಚವನ್ನು ಗಮನಿಸಿದಾಗ ಈ ಕೃತಿಯು ಕನ್ನಡದಲ್ಲಿಯೂ ಬಂದರೆ ಎಷ್ಟು ಚೆನ್ನ ಅನಿಸುತ್ತದೆ. ನನ್ನ ಪ್ರಕಾರ ಕೃತಿಯ ಸಾಹಿತ್ಯದ ಮೌಲ್ಯ ಪ್ರಧಾನವಾಗಬೇಕು. ಆದರೆ, ಕೆಲವು ಪ್ರಕಾಶಕರು/ಅನುವಾದಕರು ಕೇವಲ ಜನಪ್ರಿಯ ಲೇಖಕರ ಕೃತಿಗಳನ್ನೇ ಹುಡುಕಿ ಅನುವಾದಿಸುವುದನ್ನು ಕಂಡಿದ್ದೇನೆ. ಅದು ಹೆಚ್ಚಿನಂಶ ಹಣಮಾಡುವ ವ್ಯಾಪಾರದ ದೃಷ್ಟಿಯಿಂದ ಇರಬಹುದು.

2

ಒಂದು – ಆ ಪ್ರಕಾರಗಳು ದೊಡ್ಡ ಮಟ್ಟದಲ್ಲಿ ಮಾರಾಟವಾಗುವ ಸಾಧ್ಯತೆ ಕಡಿಮೆಯಿದೆ ಎಂದು ಪ್ರಕಾಶಕರು ತಿಳಿದುಕೊಂಡು ಅಂತಹ ಅನುವಾದಗಳನ್ನು ಪ್ರಕಟಿಸಲು ಹಿಂದೇಟು ಹಾಕುತ್ತಿರಬಹುದು. ಇನ್ನೊಂದು – ಅಂತಹ ಪ್ರಕಾರಗಳನ್ನು, ತುಸು ಹೆಚ್ಚಿಗೆ ಓದಿಕೊಂಡಿರುವವರು, ಮೇಧಾವಿಗಳು, ಸಂಶೋಧನಾಕಾರರು, ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರವೇ ಓದುವುದು ಸಾಮಾನ್ಯವಾದುದರಿಂದ ಅವರಿಗೆ ಆ ಕೃತಿಗಳು ಇಂಗ್ಲಿಷ್ ಭಾಷೆಯಲ್ಲಿ ಇದ್ದರೂ ನಡೆಯುತ್ತದೆ ಎಂಬ ದಿವ್ಯ ನಿರ್ಲಕ್ಷ್ಯವೂ ಇರಬಹುದು. ಮಾತ್ರವಲ್ಲ, ಇಂತಹ ಸಂಶೋಧನೆ ಮಾಡುವವರು ಕೃತಿಗಳು ಮೂಲ ಭಾಷೆಯಲ್ಲಿ ಇದ್ದರೆ, ಅಥವಾ ಇಂಗ್ಲಿಷಿನಲ್ಲಿ ಇದ್ದರೆ ಅವುಗಳ ಮೂಲ ಸ್ವರೂಪಕ್ಕೆ ಧಕ್ಕೆ ಬಂದಿರುವುದಿಲ್ಲ ಎಂದು ಕಲ್ಪಿಸಿಕೊಂಡು ಅವೇ ಬೇಕೆಂದು ಬಯಸುತ್ತಾರಷ್ಟೇ.

3

ಈಗಾಗಲೇ ಹಿಂದಿ, ತಮಿಳು, ಮಲಯಾಳಂ ಮತ್ತು ತೆಲುಗು ಭಾಷೆಗಳಿಂದ ಹಲವು ಕೃತಿಗಳು ಕನ್ನಡಕ್ಕೆ ಬಂದಿವೆ. ಹೆಚ್ಚಾಗಿ ನಮ್ಮಲ್ಲಿ (ಕನ್ನಡಿಗರಲ್ಲಿ) ದಕ್ಷಿಣ ಭಾರತೀಯ ಭಾಷೆಗಳು ಅಥವಾ ಪಂಚ ದ್ರಾವಿಡ ಭಾಷೆಗಳನ್ನು ತಿಳಿದಿರುವ ಜನರೇ ಇದ್ದಾರಷ್ಟೇ. ಇತರ ಭಾರತೀಯ ಭಾಷೆಗಳು – ಬಂಗಾಳಿ, ಗುಜರಾತಿ, ಪಂಜಾಬಿ, ಒಡಿಯ, ಅಸ್ಸಾಮಿ, ಮರಾಠಿಗಳನ್ನು ಅನುವಾದ ಮಾಡುವಷ್ಟರಮಟ್ಟಿಗೆ ತಿಳಿದುಕೊಂಡಿರುವ ಜನರು ಕಡಿಮೆ ಎಂಬುದು ನನ್ನ ಅನಿಸಿಕೆ.

ಮೊದಲಾಗಿ, ಈ ಮೇಲಿನ ಭಾಷೆಗಳಿಂದ ಕತೆ, ಕಾದಂಬರಿಗಳು ಅನುವಾದಗೊಂಡು ಕನ್ನಡಕ್ಕೆ ಬರಬೇಕು. ಆಗ ಕನ್ನಡದ ಓದುಗರಿಗೆ ಆಯಾಯ ಭಾಷೆಯ ಸಾಹಿತ್ಯದ ಬಗ್ಗೆ ಕುತೂಹಲ ಅಥವಾ ಆಸಕ್ತಿ ಬೆಳೆಯಲು ಸಾಧ್ಯ. ಹಿಂದೆ ತೆಲುಗು ಭಾಷೆಯ ಯಂಡಮೂರಿ ವೀರೇಂದ್ರನಾಥ್ ಅವರ ಕಾದಂಬರಿಗಳನ್ನು ರಾಜಾ ಚೆಂಡೂರು ಮೊದಲಾದವರು ಕನ್ನಡಕ್ಕೆ ತಂದು ಅವು ಮನೆಮಾತಾಗಿದ್ದು ನಮಗೆಲ್ಲಾ ತಿಳಿದಿರುವ ವಿಷಯ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನುವಾದ ಸಾಹಿತ್ಯಕ್ಕೆ ಪ್ರಾಮುಖ್ಯ ಕಡಿಮೆ. ಅದೇನಿದ್ದರೂ ಎರವಲು ತಂದದ್ದು, ಸ್ವಂತದ್ದಲ್ಲ, ಎಂಬ ಭಾವ. ಅನುವಾದವೇನಿದ್ದರೂ